ಶಿಕ್ಷಣ ದ್ವಿತೀಯ ಐಚ್ಛಿಕ ವಿಷಯವಾಗಿಟ್ಟುಕೊಂಡು ಪಿ.ಯು.ಸಿ. ಪಾಸಾದ ಬಳಿಕ ಐದು ತಿಂಗಳ ವ್ಯಾಯೋಗಿಕ ಶಿಕ್ಷಣ ಪಡೆದವರನ್ನು ಎರಡು ವರ್ಷದ ಬಿ.ಸಿ.ಎಚ್. ತರಬೇತಿಗೆ ತತ್ಸಮಾನ ಅರ್ಹತೆ ಹೊಂದಿರುವರೆಂದೂ, ಪ್ರಾಥಮಿಕ ಶಾಲಾ ಅಧ್ಯಾಪಕರಾಗಲು ಇವರು ಅರ್ಹರೆಂದೂ ಘೋಷಿಸಿದ ಪರಿಣಾಮವಾಗಿ ಸಹಸ್ರಾರು ಜನ ತರಜೇತಿ ಹೊಂದಿದರು. ಹಲವರು ಅಧ್ಯಾಪಕರಾಗಿ ನೇಮಕಗೊಂಡರು. ಆದರೆ ಇತ್ತೀಚೆಗೆ ಸರ್ಕಾರಿ ಇಡಿ ೨೪೯ ಟಿಪ್ಪಿಯು ೮೪ ತಾರೀಖು ೨೯.೧೦.೮೫ರಲ್ಲಿ ದ್ವಿತೀಯ ಪಿ.ಯು.ಸಿ ಪಾಸಾದ ಬಳಿಕ ಹನ್ನೆರಡು ತಿಂಗಳ ಪ್ರಾಯೋಗಿಕ ಶಿಕ್ಷಣ ಪಡೆಯಬೇಕೆಂದು ವಿಧಿಸಿದ್ದರಿಂದ ನಾನು ಈ ಆಜ್ಞೆಯನ್ನು ಪೂರ್ವಾನ್ವಯ ಮಾಡಿದ್ದರಿಂದ ಸಹಸ್ರಾರು ಜನ ಶಿಕ್ಷಣ ಪಡೆದವರಿಗೆ ಅನ್ಯಾಯ ವಾಗಿದೆ. ಹಿಂದೆ ಟಿ.ಸಿ.ಎಚ್. ಒಂದು ವರ್ಷದಿಂದ, ಎರಡು ವರ್ಷಕ್ಕೆ ಏರಿಸಿದಾಗ, ಎಲ್.ಎಲ್.ಬಿ. ಪದವಿಯನ್ನು ಎರಡರಿಂದ ಮೂರು ವರ್ಷಕ್ಕೆ ಹೆಚ್ಚಿಸಿದ್ದಾರೆ. ಇಂತಹ ಆಜ್ಞೆ ಪೂರ್ವಾನ್ವಯ ವಾಗಿಲ್ಲ. ಬರುವ ಶೈಕ್ಷಣಿಕ ವರ್ಷದಿಂದ ರಾಜ್ಯದ ೧೦೦ ಪ್ರೌಢ ಶಾಲೆಗಳಲ್ಲಿ ವೃತ್ತಿಮಾರ್ಗದರ್ಶನ ಶಿಕ್ಷಣ ಆರಂಭಿಸಲಾಗುವುದೆಂದು ಘೋಷಿಸಿದ ಮಾನ್ಯ ಶಿಕ್ಷಣ ಸಚಿವರು ಅಧ್ಯಾಪಕರಿಗೆ ಮಾತ್ರ ಈ ರೀತಿ ಮಂಲತಾಯಿ ಧೋರಣೆ ತೋರುವುದು ಸರಿಯಲ್ಲವಾದ್ದರಿಂದ ಈ ವಿಚಾರದಲ್ಲಿ ತಾ ೨೯.೧೦.೮೫ರ ಆಜ್ಞೆ ಪೂರ್ವಾನ್ವಯವಾಗದಂತೆ ನೋಡಿಕೊಳ್ಳಬೇಕಾಗಿ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—ಅಧ್ಯಕ್ಷರೇ, ಮಲತಾಯಿ ಧೋರಣೆಯ ಪ್ರಶ್ನೆ ಇದಲ್ಲ. ಸರಿಯಾದ ಧೋರಣೆಯನ್ನೇ ನಾವು ಅನುಸರಿಸಿದ್ದೇವೆ. ಪ್ರಾಸ್ಪೆಕ್ಟಿವ್ ಎಫೆಕ್ಟ್‌ಗೆ ಇದನ್ನು ಕೊಟ್ಟಿದ್ದೇವೆ. ಮುಂದಕ್ಕೆ ಪ್ರೀಯೂನಿವರ್ಸಿಟಿ ವಿಭಾಗವನ್ನು ತೆಗೆದುಕೊಳ್ಳುವವರು ಒಂದು ವರ್ಷ ಈ ತರಬೇತಿಯನ್ನು ಪಡೆಯಬೇಕೆನ್ನುವುದು ನಮ್ಮ ನಿಲುವು. ಅದನು ಮುಂದಿನ ವರ್ಷದಿಂದ ಜಾರಿಗೆ ತರುತ್ತೇವೆ. ಈಗ ಓದಿದವರು ಮತ್ತೆ ಹೋಗಲಿ ಎಂಬ ಉದ್ದೇಶದಿಂದಲ್ಲ. ಆ ರೀತಿ ಮಾಡಿಲ್ಲ.

X ಮೈಸೂರು ನಗರದಲ್ಲಿ ನ್ಯಾಯ ಬೆಲೆ ಅಂಗಡಿಗಳನ್ನು ರದ್ದು ಮಾಡಿರುವುದು.

ಶ್ರೀ ವೇದಾಂತ ಹೆಬ್ಬಿಗೆ (ಕೃಷ್ಣರಾಜ).—ಮಾನ್ಯ ಉಪಾಧ್ಯಕ್ಷರೇ, ಮೈಸೂರು ನಗರದಲ್ಲಿ ನ್ಯಾಯ ಬೆಲೆ ಅಂಗಡಿಗಳನ್ನು ರದ್ದು ಮಾಡಲು ಸರ್ಕಾರ ನಿರ್ಧಾರ ಮಾಡಿರುವುದಾಗಿ ನಾಗರೀಕ ಸರಬರಾಜು ಇಲಾಖೆ ಕಾರ್ಯದರ್ಶಿಯವರು ಸಂತೋಷಲೆ ಕಳಿಸಿದ್ದಾರೆ. ಇದರಿಂದ ಅನೇಕ ನಿರುದ್ಯೋಗಿಗಳಿಗೆ ತೊಂದರೆಯಾಗಲಿದೆ ಮತ್ತು ಸಾರ್ವಜನಿಕರಿಗೂ ತೊಂದರೆಯಾಗಲಿದೆ. ಇದರ ಬಗ್ಗೆ ಸಂಬಂಧಪಟ್ಟ ಸಚಿವರ ಗಮನವನ್ನು ಸೆಳೆಯುತ್ತೇನೆ

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಉಪಾಧ್ಯಕ್ಷರೇ, ೧೯೪೪ರಲ್ಲಿ ಕೆಲವು ಅಗತ್ಯವಸ್ತುಗಳನ್ನು ನ್ಯಾಯ ಬೆಲೆ ಅಂಗಡಿಗಳ ಮುಖಾಂತರ ವಿತರಣೆ ಮಾಡುವ ಪದ್ಧತಿ ಜಾರಿಗೆ ಬಂತು. ೪೦ ಸಾವಿರಕ್ಕೆ ಮೇಲ್ಪಟ್ಟಿರುವ ನಗರ ಪ್ರದೇಶಗಳಲ್ಲಿ ಇರುವ ಅಂಗಡಿಗಳು ಇದಕ್ಕೆ ಒಳಪಟ್ಟವು ಅವುಗಳ ಮಾಲೀಕರನ್ನು ಕರೆದು ಅಗತ್ಯವಸ್ತುಗಳ ದುರುಪಯೋಗ ಆಗುತ್ತಿದೆಯೆಂದೂ, ಹೋಲ್ ಸೇಲ್ ರೇಲ್ ಮತ್ತು ರೀಟೆಲ್ ರೇಟ್‌ಗಳ ತಾರತಮ್ಯವೇ ಇಲ್ಲದಂತಾಗುತ್ತಿದೆಯೆಂದು ಹೀಗೆ ಮುಂದಾಗದಂತೆ ನೋಡಿಕೊಳ್ಳಲು ಎಚ್ಚರಿಕೆ ನೀಡಲಾಯಿತು. ಆದರೂ ಸಹ ಅವರು ದಾರಿಗೆ ಬರದಿದ್ದಾಗ ಸಬ್ಸಿಡಿಯನ್ನು ಸಚಿವ ಸಂಪುಟದಲ್ಲಿ ತಂದು ಖಾಸಗಿ ಅಂಗಡಿಗಳನ್ನು ರದ್ದು ಮಾಡಬೇಕೆಂಬ ತೀರ್ಮಾನ ತೆಗೆದುಕೊಳ್ಳಲಾಯಿತು. ಇದಾದ ಮೇಲೆ ಶಾಸಕರು ಮತ್ತು ಜನತಾ ಪ್ರತಿನಿಧಿಗಳೆಲ್ಲರೂ ಖಾಸಗಿ ಅಂಗಡಿಗಳನ್ನು ರದ್ದು ಮಾಡಿದರೆ ತೊಂದರೆಯಾಗುತ್ತದೆಂದೂ ಯಾರ್ಯಾ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೋ ಅಂಥ ಕೆಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಿ. ಎಲ್ಲರ ಮೇಲೂ ಬಹಿಷ್ಕಾರ ಬಳಸುವುದು ಸರಿಯಲ್ಲ ಎಂದು ತಿಳಿಸಿದಾಗ. ಕ್ಯಾಬಿನೆಟ್ ತೀರ್ಮಾನವನ್ನು ಅಷ್ಟಕ್ಕೆ ನಿಲ್ಲಿಸಿ ಸರಿ ಕಂಡು ಬಂದವುಗಳನ್ನು ರದ್ದು ಮಾಡಲ್ಲಿಲ್ಲ. ಆದರೆ ಯಾರು ಉಲ್ಲಂಘನೆ ಮಾಡುತ್ತಾರೋ ಅವರು ಎಷ್ಟೇ ದೊಡ್ಡವರಿರಲಿ ಅವರ ಅಂಗಡಿಗಳನ್ನು ರದ್ದು ಮಾಡಿದೆವು ಎಲ್ಲವನ್ನು ರದ್ದು ಪಡಿಸಲಿಲ್ಲ. ನ್ಯಾಯವಾದವುಗಳನ್ನು ಉಳಿಸಿದ್ದೇವೆ. ಇನ್ನು ಮುಂದೆಯೂ ಹೀಗೇ ಮಾಡುತ್ತೇವೆ.

ಮೈಸೂರಿನಲ್ಲಿ ಖಾಸಗಿ ಅಂಗಡಿಗಳು ಇವೆ. ೧೯೪೪–೪೫ರ ಸರ್ಕ್ಯುಲರ್ ಏನಿದೆ ಅದಕ್ಕೆ ಇನ್ನೂ ಜೀವ ಇದೆ. ಚೆನ್ನಾಗಿ ನಡೆಸುವವರಿಗೆ ಉತ್ತೇಜನವನ್ನೂ ಕೊಡುತ್ತೇವೆ.